ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಮನವಿ ಬಂದ ಮೇಲೆ ಸೂಕ್ತ ಕಂಡರೆ ರೆಮಿಷ್ಷನ್ ಕೊಡುವ ವಿಚಾರದಲ್ಲಿ ವರದಿ ಮಾಡಿ ಎಂದು ಡೆಪ್ಯುಟಿ ಕಮಿಷನರಿಗೆ ಸೂಚನೆ ಕೊಟ್ಟೆ, ಅದರಮೇಲೆ ಅವರು ಪರಿಶೀಲನೆ ಮಾಡಿ ರೆಮಿಷ್ಷನ್ ಕೊಡುವುದು ಅವಶ್ಯಕವಿಲ್ಲವೆಂದು ವರದಿ ಮಾಡಿದರು.

ಶ್ರೀ ಬಿ. ರಾಚಯ್ಯ.—ಚಾಮರಾಜನಗರ ತಾಲ್ಲೂಕಿನ ಅಮಲ್ದಾರರು ರೆಮಿಷ್ಷನ್ ಕೊಡಬೇಕೆಂದು ವರದಿ ಮಾಡಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಬಿ. ರಾಚಯ್ಯ.—ಶ್ಯಾನುಭೋಗರು ಮನೆಯಲ್ಲ ಕುಳಿತುಕೊಂಡು ಪಹಣಿ ಬರೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ —ಬಂದಿಲ್ಲ.

Famine Relief Works in Tumkur District.

Q.—325. **Sri T. N. MUDALAGIRI GOWDA** (Kunigal).—

Will the Government be pleased to state :—

(*a*) the amount allotted out of the Famine Relief Fund for taking up famine relief works in Tumkur District up to 15th June 1953 ;

(*b*) out of the amount allotted to Tumkur District, the amount provided to each constituency in the District and the amount spent ?

A.—**Sri Kadidal MANJAPPA** (Minister for Revenue and Public Works).—

(*a*) Rs. 2,35,000.

(*b*) Distribution of grants is made talukwise and not constituencywise. Hence ; only talukwise details of amounts allotted and spent are furnished below :—

Sl. No.	Taluk	Grant for Distress Relief Works and Fodder	
		Allotment	Expenditure
		Rs.	Rs.
1	Pavagada ...	24,000	12,014
2	Sira ..	10,000	3,785
3	Madhugiri ...	87,500	79,490
4	Koratagere ...	7,500	9,574
5	Tumkur ...	19,000	10,000
6	Kunigal ...	9,500	1,564
7	Gubbi ...	16,000	6,172
8	Turuvekere ...	10.000	2,955
9	Tiptur ...	16,000	9,942
10	Chicknaikanahalli	18,000	11,567
	DISTRICT OFFICE.	17,500	1,246
	Total ...	2,35,000	1,48,949

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಉತ್ತರದಲ್ಲಿ ತಾಲ್ಲೂಕುವಾರು ಕೊಟ್ಟಿದೆ ; ನಾನು ಕೇಳಿರುವಂತೆ ಕಾರ್ಯಸ್ಥಿಟ್ಯೂಯರ್ಸಿವಾರು ಕೊಟ್ಟಿಲ್ಲ, ಕಾರಣವೇನು ?

ಅಧ್ಯಕ್ಷರು.—ಆರೀತಿ ಲೆಕ್ಕ ಇದುವರೆಗೂ ಕೊಟ್ಟಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ —ಕುಣಿಗಲು ತಾಲ್ಲೂಕಿಗೆ ಅಷ್ಟು ಕಡಮೆ ಖರ್ಚುಮಾಡಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲ ಪ್ರದೇಶಗಳಲ್ಲಿಯೂ ಡಿಸ್ಟ್ರೆಸ್ ಪರಿಸ್ಥಿತಿ ಇಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಕೆಲವು ಪ್ರಾಂತಗಳಲ್ಲಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆಯಾ ಪ್ರದೇಶದಲ್ಲಿ ರಾವ ಡಿಸ್ಟ್ರೆಸ್ ಪರಿಸ್ಥಿತಿಗನುಗುಣವಾಗಿ ಹಣವನ್ನೊದಗಿಸಿದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ದೂರು ಬಂದರೂ ಕೂಡ ಹಣ ಖಾಸ್ತಿಮಾಡಲಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇಂಡಿಯಾ ಸರ್ಕಾರಕ್ಕೆ ದೂರು ಕಳುಹಿಸಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಆರ್. ಅನಂತರಾಮ್.—ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಕ್ಷಾಮವಿದೆಯೆ ? (ನಗು !)

(ಉತ್ತರವಿಲ್ಲ).

SHORT NOTICE QUESTION AND ANSWER.

Damage by floods to Road at the end of the Wellesley Bridge at Srirangapatna.

Q.—9. **Sri K. PUTTASWAMY** (Srirangapatna).—

Will the Government be pleased to state :—

(*a*) whether the road at the southern end of the Wellesley Bridge at Srirangapatna was inundated by Cauvery river floods recently ;

(*b*) the estimated loss due to the washing away of this road ;

(*c*) whether they have got the bridge tested after the floods ;

(*d*) whether there is a proposal to construct a new bridge at a safer place ; if so, when they would take up the work ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) About Rs. 4,000.

(*c*) The bridge has been examined.

(*d*) The matter is under consideration.